ಇ) ಕೆ.ಬಿ.ಕ್ರಾಸ್‌ನಲ್ಲಿ ಪೋಲೀಸ್ ಹೊರ ಠಾಣೆ ಇದ್ದು, ಇದು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿದೆ. ಆದುದರಿಂದ ಪೋಲೀಸ್ ಠಾಣೆ ಪ್ರಾರಂಭಿಸುವ ಅಗತ್ಯ ಇಲ್ಲ.

ಈ) ಅಗತ್ಯತೆಗೆ ಅನುಗುಣವಾಗಿ ಕೆ.ಬಿ.ಕ್ರಾಸ್‌ನಲ್ಲಿ ಈಗಾಗಲೇ ಹೊರ ಠಾಣೆ ಕಾರ್ಯ ನಿರ್ವಹಿಸುತ್ತಿರುವುದರಿಂದ ಪೋಲೀಸ್ ಠಾಣೆ ಪ್ರಾರಂಭಿಸುವ ಅಗತ್ಯವಿಲ್ಲ.

2325(2813) ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ):- ಮಾನ್ಯ ಮುಖ್ಯ ಮಂತ್ರಿಗಳು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಬೆಂಕಿ ಆಕಸ್ಮಿಕಗಳು ಹೆಚ್ಚಾಗಿದ್ದು, ಇಲ್ಲಿ ಅಗ್ನಿಶಾಮಕ ಠಾಣೆ ಇಲ್ಲದಿರುವುದರಿಂದ ತುಂಬಾ ದೂರದಿಂದ ಅಗ್ನಿಶಾಮಕ ದಳದವರು ಬಂದು ಬೆಂಕಿ ನಿಯಂತ್ರಿಸಲು ಆಗುತ್ತಿಲ್ಲದಿರುವುದು ಸರ್ಕಾರಕ್ಕೆ ಗೊತ್ತಿದೆಯೆ;

ಆ) ಹಾಗಿದ್ದಲ್ಲಿ, ಇಲ್ಲಿ ಅಗ್ನಿಶಾಮಕ ಠಾಣೆ ನಿರ್ಮಿಸದಿರಲು ಕಾರಣವೇನು;

ಇ) ಯಾವಾಗ ನಿರ್ಮಿಸಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹಾಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಗೂ ಅದರ ಸುತ್ತ ಮುತ್ತ ಅಗ್ನಿ ಅಪಘಾತ ಸಂಭವಿಸಿದಲ್ಲಿ ಸುಮಾರು 23 ಕಿ.ಮೀ. ಅಂತರದಲ್ಲಿರುವ ತಿಪಟೂರು ಅಗ್ನಿಶಾಮಕ ಠಾಣೆಯಿಂದ ವ್ಯವಸ್ಥಿತವಾಗಿ ನಂದಿಸಲಾಗುತ್ತಿದೆ.

ಆ) ಈಗಾಗಲೇ ಮಂಜೂರಾಗಿರುವ 27 ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲು ಆಧ್ಯತೆ ನೀಡಲಾಗಿದ್ದು ನಂತರ ಹೊಸ ಠಾಣೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಮುಂದೆ ಪರಿಗಣಿಸಲಾಗುವುದು.

2326(2815) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಡಾ: ನಂಜುಂಡಪ್ಪ ವರದಿಯನ್ನು ಸರ್ಕಾರ ಒಪ್ಪಿದೆಯೆ ಹಾಗೂ ಇದರ ಅನುಷ್ಠಾನಕ್ಕೆ ಸರ್ಕಾರದ ಅಧಿಸೂಚನೆ ಹೊರಡಿಸಲಾಗಿದೆಯೇ.

ಆ) ಯಾವ ಯಾವ ಜಿಲ್ಲೆಯ ಯಾವ ಯಾವ ತಾಲ್ಲುಕುಗಳು ಈ ವರದಿಯ ಅನ್ವಯ ಹಿಂದುಳಿದ ತಾಲ್ಲೂಕುಗಳಾಗಿವೆ;

ಇ) ತುಮಕೂರು ಜಿಲ್ಲೆಯಲ್ಲಿನ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ಮಲತಾಯಿ ಧೋರಣೆ ಅನುಸರಿಸಲು ಕಾರಣವೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ಸರ್ಕಾರವು ಡಾ: ನಂಜುಂಡಪ್ಪನವರ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ತಾತ್ವಿಕವಾಗಿ ಒಪ್ಪಿದೆ.

ಆ) ಅತ್ಯಂತ ಹಿಂದುಳಿದ, ಅತಿ ಹಿಂದುಳಿದ ಹಾಗೂ ಹಿಂದುಳಿದ ಎಂದು ಗುರುತಿಸಲಾದ 114 ತಾಲ್ಲೂಕುಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ 114 ತಾಲ್ಲೂಕುಗಳ ಅಭಿವೃದ್ಧಿಗೆ 16,000 ಕೋಟಿ ರೂ.ಗಳ ವಿಶೇಷ ಅಭಿವೃದ್ಧಿ ಯೋಜನೆಯೊಂದನ್ನು ತಯಾರಿಸಲು ಸಮಿತಿಯು ಶಿಫಾರಸ್ಸುಮಾಡಿದೆ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಉದ್ಭವಿಸುವುದಿಲ್ಲ.

ANNEXURE

BACKWARD TALUKS IDENTIFIED BY THE HIGH POWER COMMITTEE FOR REDRESSAL OF REGIONAL IMBALANCES

DISTRICT	MOST BACKWARD TALUKS	MORE BACKWARD TALUKS	BACKWARD TALUKS
Bellary Dist	Sandur Kudlagi	Siraguppa Hagaribommanahalli Hadagalli	
Bidar Dist	Bhalki Humnabad Aurad Basavakalyan		
Gulbarga Dist	Sedam Shorapur Yadgir Chitapur Afzlapur Shapur Aland Chincholi Jewargi		Gulbarga
Koppal Dist	Kustagi Yelgurga	Koppal	Gangavati
Raichur Dist	Sindhanoor Manvi Lingasugur Deodurga	Raichur	

Bagalkot dist	Bilagi	Hungund Badami	
Bagalkot dist		Athni Gokak Sudatti	Raibag Baihongal Ramdurg Hukkeri
Bijapur Dist	Muddebihal B. Bagewadi Indi Sindagi		Bijapur
Dharwad dist		Kalaghatagi	Navalgund Kundagol
Gadag district		Mundaragi	Rom Shirahatti
Haveri District		Savanur Shiggon Hirekerur	Haveri Byagadi Hangal

2329(1960) ಶ್ರೀ ಮಲ್ಲಿಕಾರ್ಜುನ್ ಸಿದ್ಧರಾಮಪ್ಪ ಖೂಬ (ಬಸವಕಲ್ಯಾಣ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಷ್ಟ್ರೀಯ ಹೆದ್ದಾರಿ 4, 9, 13ಗಳಲ್ಲಿ ಓವರ್‌ಲೋಡ್ ಆಗಿ ಟ್ರಕ್ಕುಗಳು ಹಾಗೂ ಭಾರಿ ವಾಹನಗಳು ಆರ್.ಟಿ.ಓ. ಚಿಕ್‌ಪೋಸ್ಟ್‌ಗಳ ಸಮಕ್ಷಮದಿಂದಲೇ ಸಾಗುತ್ತಿದ್ದಾಗ್ಯೂ ಚಕ್ ಪೋಸ್ಟ್‌ನಲ್ಲಿ ಏನು ಕ್ರಮ ತೆಗೆದುಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂಇದೆಯೇ;

ಆ) ಹಾಗಿದ್ದರೆ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಳ್ಳುವ ಕ್ರಮವೇನು;

ಇ) ಇವುಗಳ ಮೇಲೆ ಗೂಡ್ಸ್ ಸಾಗಾಣಿಕೆ ಮಾಡಿ ನಿಯಮ ಉಲ್ಲಂಘಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ರಾಜ್ಯದಲ್ಲಿ ಹಾಲಿ ಎಷ್ಟು ವೋಲ್ವೋ ಬಸ್ಸುಗಳನ್ನು ಓಡಿಸಲಾಗುತ್ತಿದೆ;

ಉ) ಇದು ಸಂಸ್ಥೆಗೆ ಲಾಭದಾಯಕವಾಗಿದೆಯೇ;

ಊ) ಇದರಿಂದ ವರ್ಷಕ್ಕೆ ಎಷ್ಟು ಲಾಭವಾಗಬಹುದು;

ಋ) ಪ್ರವಾಸಿ ಕೇಂದ್ರಗಳಿಗೆ ಎಷ್ಟು ವೋಲ್ವೋ ಬಸ್ಸುಗಳನ್ನು ಹಾಕಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಂದಿದೆ.

ಆ) ಓವರ್ ಲೋಡ್ ವಾಹನಗಳನ್ನು ತನಿಖೆ ಮಾಡಿ, ಪ್ರಕರಣಗಳನ್ನು ದಾಖಲಿಸಿ ದಂಡ ವಸೂಲಿ ಮಾಡಲಾಗುತ್ತಿದೆ.